■ ಶಶಿಕುಮಾರ್ ಸಿ.

# ವೇಗದ ದೇಸಿ ಇಂಟರ್‌ನೆಟ್ ರೂಟರ್



ತಂತ್ರಜ್ಞಾನ ಕ್ಷೇತ್ರದ ಹೊಸತನಗಳಿಗೆ ವೇಗವಾಗಿ ತೆರೆದುಕೊಳ್ಳುತ್ತಿರುವ ದೇಶದಲ್ಲಿ, ಅದಕ್ಕೆ ಅಗತ್ಯವಾದ ಮೂಲಸೌಕರ್ಯಗಳೂ ಅಷ್ಟೇ ವೇಗದಲ್ಲಿ ರೂಪುಗೊಳ್ಳುತ್ತಿವೆ. ಅದಕ್ಕೆ ಉದಾಹರಣೆ, ದೇಶದ ಮೊದಲ ಅತಿವೇಗದ ರೂಟರ್ ಅನಾವರಣ.

ಭಾರತದ ಮೊಟ್ಟ ಮೊದಲ ಅತಿ ವೇಗದ ಮತ್ತು ಸ್ಥಳೀಯವಾಗಿ ಅಭಿವೃದ್ಧಿಪಡಿಸಿದ ಐಪಿ/ಎಂಪಿಎಲ್‌ಎಸ್ (ಮಲ್ಟಿ ಪ್ರೋಟೋಕಾಲ್ ಲೇಬಲ್ ಸ್ವಿಚಿಂಗ್) ರೂಟರ್ ಅನ್ನು ಸಂವಹನ, ಎಲೆಕ್ಟ್ರಾನಿಕ್ ಮತ್ತು ಮಾಹಿತಿ ತಂತ್ರಜ್ಞಾನ ಮತ್ತು ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಈಚೆಗೆ ಅನಾವರಣಗೊಳಿಸಿದ್ದಾರೆ. ಈ ರೂಟರ್ ಅನಾವರಣಗೊಂಡಿದ್ದು ಬೆಂಗಳೂರಿನಲ್ಲಿ. ಈ ರೂಟರ್ 2.4 ಟಿಬಿಪಿಎಸ್ ಸಾಮರ್ಥ್ಯ ಹೊಂದಿದೆ.

ಸರ್ಕಾರಿ ದೂರಸಂಪರ್ಕ ಇಲಾಖೆ ಮತ್ತು ಪ್ರೈವೆಟ್ಟಿ ಎರಡರ ಸಹಭಾಗಿತ್ವದಲ್ಲಿ ಈ ರೂಟರ್ ಅಭಿವೃದ್ಧಿಗೊಂಡಿದೆ. ಈ ಬಗ್ಗೆ ಮಾತನಾಡಿದ ಸಚಿವರು, 'ನೆಟ್‌ವರ್ಕಿಂಗ್ ಡಿಜಿಟಲ್ ಇಂಡಿಯಾದ ಪ್ರಯತ್ನಕ್ಕೆ ಪ್ರಮುಖ ಟೂಲ್ ಇದಾಗಿದೆ. ಇಂತಹ ರೂಟರ್‌ಗಳು ಡಿಜಿಟಲ್ ಇಂಡಿಯಾದಲ್ಲಿ ಪ್ರಮುಖ ಪಾತ್ರವಹಿಸಲಿವೆ. ಆದ್ದರಿಂದ, ಈ ಸಂಕೀರ್ಣ ಉಪಕರಣಗಳನ್ನು ಭಾರತದಲ್ಲಿಯೇ ವಿನ್ಯಾಸಗೊಳಿಸಿ ಅಭಿವೃದ್ಧಿಪಡಿಸಲಾಗಿದೆ' ಎಂದು ಅವರು ಹೇಳಿದ್ದಾರೆ.

### ರೂಟರ್‌ನ ಟಾಪ್ ಫೀಚರ್‌ಗಳೇನು?

- ಸ್ಥಳೀಯವಾಗಿ ಅಭಿವೃದ್ಧಿಪಡಿಸಿದ ಈ ಅತಿವೇಗದ ರೂಟರ್‌ನ ಇಂಟರ್‌ನೆಟ್ ಡಾಟಾ ವರ್ಗಾವಣೆ ವೇಗ 2.4 ಟಿಬಿಪಿಎಸ್.
- ಇದು 1,000 ಗಿಗಾಬೈಟ್ಸ್‌ಗೆ ಮತ್ತು 1,00,000 ಲಕ್ಷ ಕೋಟಿ ಬೈಟ್ಸ್ ಪರ್ ಸೆಕೆಂಡ್‌ಗೆ ಸಮವಾಗಿದೆ.
- ರೈಲ್ವೆ ಸಂವಹನ, ಪವರ್ ಗ್ರಿಡ್, ಟೆಲಿಕಮ್ಯೂನಿಕೇಷನ್ ಮತ್ತು ಟೆಲಿವಿಷನ್ ಮೀಡಿಯಾ ಕ್ಷೇತ್ರಗಳಲ್ಲಿನ ಬಳಕೆಯಿಂದ ಈ ಕ್ಷೇತ್ರಗಳ ಸಮಗ್ರ ಅಭಿವೃದ್ಧಿಗೆ ಸಹಾಯವಾಗಲಿದೆ.
- ಎಂಪಿಎಲ್‌ಎಸ್ ಒಂದು ರೂಟಿಂಗ್ ತಂತ್ರಜ್ಞಾನ. ಇದನ್ನು ಟೆಲಿಕಮ್ಯೂನಿಕೇಷನ್ ನೆಟ್‌ವರ್ಕ್‌ಗಳಲ್ಲಿ ಬಳಸಲಿದ್ದು, ಒಂದು ನೋಡ್‌ನಿಂದ ಮುಂದಿನದಕ್ಕೆ ಡಾಟಾ ನಿರ್ದೇಶಿಸುವ ದೂರಸಂಪರ್ಕ ಜಾಲಗಳಲ್ಲಿ ಬಳಸಲಾಗುತ್ತದೆ.
- ನೆಟ್‌ವರ್ಕ್ ವಿಳಾಸಗಳಿಗಿಂತ ಲೇಬಲ್‌ಗಳ ಆಧಾರದ ಮೇಲೆ ಡಾಟಾ ವರ್ಗಾವಣೆ ನಡೆಸಲಾಗುತ್ತದೆ.
- ಸಾಧನವು ನೆಟ್‌ವರ್ಕಿಂಗ್ ತಂತ್ರಜ್ಞಾನದಲ್ಲಿ ಪ್ರಮುಖ ಪಾತ್ರ ಪ್ರತಿನಿಧಿಸುತ್ತದೆ, ಇದು ಭಾರತದ ಡಿಜಿಟಲ್ ಮೂಲಸೌಕರ್ಯ ಹೆಚ್ಚಿಸಲು ಭರವಸೆ ನೀಡುತ್ತದೆ. ■

# ವಾಟ್ಸ್‌ಆ್ಯಪ್ ಮತ್ತೆರಡು ಫೀಚರ್

ಮೊಬೈಲ್ ಅಪ್ಲಿಕೇಷನ್ ಮತ್ತು ವೆಬ್ ಆವೃತ್ತಿಯನ್ನು ಬಳಕೆಸ್ನೇಹಿಯಾಗಿಸಲು ವಾಟ್ಸ್‌ಆ್ಯಪ್ ಹೊಸ ಫೀಚರ್‌ಗಳನ್ನು ಬಿಡುಗಡೆ ಮಾಡುತ್ತಲೇ ಇರುತ್ತದೆ. ಈಗ ಹೊಸದಾಗಿ ಮತ್ತೆರಡು ಹೊಸ ಅಪ್‌ಡೇಟ್ ಗಳನ್ನು ತನ್ನ ಬಳಕೆದಾರರಿಗೆ ಕಲ್ಪಿಸಲಿದೆ.

ದೀರ್ಘಾವಧಿಯ ವಿಡಿಯೊಗಳನ್ನು ಸ್ಟೇಟಸ್‌ನಲ್ಲಿ ಹಂಚಿಕೊಳ್ಳಲು ಮತ್ತು 'ಯುಪಿಐ' (ಯುನಿಫೈಡ್ ಪೇಮೆಂಟ್ಸ್ ಇಂಟರ್‌ಫೇಸ್) ಮೂಲಕ ವೇಗವಾಗಿ ಪೀರ್–ಟು–ಪೀರ್ (P2P) ಪಾವತಿಗಳನ್ನು ಮಾಡುವಂತಹ ಎರಡು ಫೀಚರ್‌ಗಳನ್ನು ಬಿಡುಗಡೆ ಮಾಡಲಿದೆ. ಇದು ವಾಬೇಟಾಇನ್ಫೊ ವರದಿ.

### ವಿಡಿಯೊ ಅವಧಿ ವಿಸ್ತರಣೆ

ಬಳಕೆದಾರರು ತಮ್ಮ ಸ್ಟೇಟಸ್‌ನಲ್ಲಿ 60 ಸೆಕೆಂಡ್‌ಗಳುಳ್ಳ ವಿಡಿಯೊಗಳನ್ನು ಹಂಚಿಕೊಳ್ಳಲು ಈ ಫೀಚರ್ ಅನುವು ಮಾಡಿಕೊಡುತ್ತದೆ. ಆ್ಯಂಡ್ರಾಯ್ಡ್ 2.24.7.6ರಲ್ಲಿ ವಾಟ್ಸ್‌ಆ್ಯಪ್ ಬೀಟಾ ಬಳಕೆದಾರರು, 60 ಸೆಕೆಂಡುಗಳವರೆಗಿನ ವಿಡಿಯೊಗಳನ್ನು ಅಪ್‌ಲೋಡ್ ಮಾಡಬಹುದಾಗಿದೆ. ಈಗ 30 ಸೆಕೆಂಡ್‌ಗಳುಳ್ಳ ವಿಡಿಯೊಗಳನ್ನಷ್ಟೇ ಸ್ಟೇಟಸ್‌ನಲ್ಲಿ ಹಂಚಿಕೊಳ್ಳಬಹುದು. ಇದರ ಮಿತಿಯನ್ನು 60 ಸೆಕೆಂಡ್‌ಗಳಿಗೆ ಏರಿಸಿರುವುದರಿಂದ ವಿಡಿಯೊ ಸ್ಟೇಟಸ್ ಮತ್ತಷ್ಟು ಪರಿಣಾಮಕಾರಿಯಾಗಿ ಕಾಣಲಿದೆ.

### ವೇಗದ ಪಾವತಿಗೆ ಇಂಬು

ಹೊಸ ಅಪ್‌ಡೇಟ್‌ನಲ್ಲಿ, ವ್ಯಾಪಾರಿಗಳು ಅಥವಾ ಇತರ ಬಳಕೆದಾರರಿಗೆ ವಾಟ್ಸ್‌ಆ್ಯಪ್ ಪೇ ಮೂಲಕ ಹಣ ಕಳುಹಿಸಲು ಯಾವುದೇ ಕ್ಯುಆರ್ ಕೋಡ್ ಅನ್ನು ತ್ವರಿತವಾಗಿ ಸ್ಕ್ಯಾನ್ ಮಾಡಬಹುದು. ಸದ್ಯ ಚಾಲ್ತಿಯಲ್ಲಿರುವ ಕ್ಯುಆರ್ ಕೋಡ್ ಮಂದಗತಿಯಲ್ಲಿ ಕಾರ್ಯನಿರ್ವಹಿಸುತ್ತಿದೆ.

ವಾಟ್ಸ್‌ಆ್ಯಪ್ ಹೊಸ ಕ್ಯುಆರ್ ಕೋಡ್ ಸ್ಕ್ಯಾನರ್, ಶಾರ್ಟ್‌ಕಟ್ ಮೂಲಕ ವೇಗವಾಗಿ ಯುಪಿಐ ಪಾವತಿಗಳನ್ನು ಮಾಡಲು ನೆರವಾಗುತ್ತದೆ. ಚಾಟ್ ಪಟ್ಟಿಯ ಮೇಲಿನ ಭಾಗದಲ್ಲಿ ಕ್ಯುಆರ್ ಕೋಡ್ ಆಯ್ಕೆ ಒದಗಿಸಲಾಗಿದೆ. ಇದನ್ನು ಕ್ಯಾಮೆರಾದ ಎಡಭಾಗದಲ್ಲಿ ಮತ್ತು ಪರದೆ ಮೇಲಿನ ಬಲ ಮೂಲೆಯಲ್ಲಿ ಕಾಣಬಹುದು. ಅಂದರೆ ಮುಖ್ಯ ಚಾಟ್ ಪಟ್ಟಿಯ ಮೇಲೆ ಕಾಣಬಹುದು. ಇದರಿಂದ ವಾಟ್ಸ್‌ಆ್ಯಪ್ ಮೆನುವಿಗೆ ಹೋಗಿ ಪೇಮೆಂಟ್ ಆಯ್ಕೆಯನ್ನು ಟ್ಯಾಪ್ ಮಾಡುವುದು, ಪೇಮೆಂಟ್ಸ್ ಆಯ್ಕೆಗೆ ಹೋಗಿ ಸ್ಕ್ಯಾನ್ ಪೇಮೆಂಟ್ ಕ್ಯುಆರ್ ಕೋಡ್ ಆಯ್ಕೆ ಮಾಡುವುದು ತಪ್ಪುತ್ತದೆ.

### ಸ್ಕ್ರೀನ್‌ಶಾಟ್ ಸ್ಥಗಿತ

ಬಳಕೆದಾರರ ಪ್ರೊಫೈಲ್ ಫೋಟೊಗಳ ಸ್ಕ್ರೀನ್‌ಶಾಟ್ ಆಯ್ಕೆಯನ್ನು ವಾಟ್ಸ್‌ಆ್ಯಪ್ ಸ್ಥಗಿತಗೊಳಿಸಿದೆ. ಬಳಕೆದಾರರ ವೈಯಕ್ತಿಕ ಸುರಕ್ಷತೆ ದೃಷ್ಟಿಯಿಂದ ಕಂಪನಿ ಈ ನಿರ್ಧಾರ ಕೈಗೊಂಡಿದೆ. ಆದರೆ, ಪಿಕ್ಸೆಲ್ ಸ್ಮಾರ್ಟ್‌ಫೋನ್‌ಗಳಲ್ಲಿ ಇದು ಸ್ಥಗಿತಗೊಂಡಿಲ್ಲವಾದರೂ, ಸ್ಕ್ರೀನ್‌ಶಾಟ್ ತೆಗೆದಾಗ ಇಡೀ ಚಿತ್ರವೇ ಕಪ್ಪಾಗುತ್ತದೆ. ■